ಕಾರಂಜಾ ಯೋಜನೆ ಜಲಾಶಯದಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕಮಲಾಪೂರ ಗ್ರಾಮವು ಪೂರ್ತಿಯಾಗಿ ಮುಳುಗಡೆಯಾಗಿದ್ದು ಈ ಗ್ರಾಮವನ್ನು ಬೀದರ (ದಕ್ಷಿಣ) ಕ್ಷೇತ್ರದ ನಿಜಾಮಪೂರದಲ್ಲಿ ಪುನರ್ವಸತಿಗೊಳಿಸಲಾಗಿದೆ. ಸದರಿ ಪುನರ್‌ವಸತಿ ಕೇಂದ್ರದಲ್ಲಿ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕಾಯ್ದೆಯಡಿಯಲ್ಲಿ ಹಾಗೂ ಕೇಂದ್ರ ಜಲ ಆಯೋಗದ ನಿಯಮಗಳನ್ವಯ ಎಲ್ಲಾ ಮೂಲ ಭೂತ ಸೌಕರ್ಯಗಳಾದ ಕೂಡು ರಸ್ತೆ, ಆಂತರಿಕ ರಸ್ತೆ, ಸಾರ್ವಜನಿಕ ಕಟ್ಟಡಗಳು, ಕಾರ್ಮಿಕ ಕಟ್ಟಡಗಳು ನೀರು ಸರಬರಾಜು, ವಿದ್ಯುತ್ ಪೂರೈಕೆ. ಮತ್ತು ಸ್ಮಶಾನ ಭೂಮಿಗಳನ್ನು ಒದಗಿಸಿ, ಜಿಲ್ಲಾ ಪಂಚಾಯತ್ ವಶಕ್ಕೆ ದಿನಾಂಕ:19–5–2000ರಂದು ಹಸ್ತಾಂತರಿಸಲಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಯಾವುದೇ ವೆಚ್ಚ ಮಾಡಿರುವುದಿಲ್ಲ.

ಊ) ಇನ್ನು ಎಷ್ಟು ಪ್ರಕರಣಗಳಲ್ಲಿ ಪರಿಹಾರ ಧನವನ್ನು ವಿತರಣೆ ಮಾಡಬೇಕಾಗಿದೆ?

ಇನ್ನು ಅಂದಾಜು (39) ಪ್ರಕರಣಗಳಲ್ಲಿ ಪರಿಹಾರ ಧನ ಪಾವತಿಸುವುದು ಬಾಕಿ ಇರುತ್ತದೆ. ಇದಕ್ಕಾಗಿ ಅಂದಾಜು ರೂ.2.11 ಕೋಟಿಗಳ ಪರಿಹಾರ ಧನ ಪಾವತಿಸಬೇಕಾಗಿರುತ್ತದೆ.

ಊ) ಈ ಪ್ರಕರಣಗಳು ಎಷ್ಟು ದಿನಗಳಿಂದ ಬಾಕಿ ಇವೆ; ಹಾಗಿದ್ದಲ್ಲಿ, ಇವರುಗಳಿಗೆ ಪರಿಹಾರ ಧನವನ್ನು ಯಾವಾಗ ವಿತರಿಸಲಾಗುವುದು ವಿಳಂಬಕ್ಕೆ ಕಾರಣಗಳೇನು?

ಈ ಪ್ರಕರಣಗಳು ಸುಮಾರು ಒಂದು ವರ್ಷದಿಂದ ಬಾಕಿ ಇದ್ದು 4(1) ಮತ್ತು 6(1)ರ ಅಧಿಸೂಚನೆ ಹೊರಡಿಸುವ ಹಂತದಲ್ಲಿದ್ದು, ಭೂಸ್ವಾಧೀನ ಕಾಯ್ದೆ ಅನುಸಾರ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಅಂದಾಜು ಎರಡು ವರ್ಷ ಅವಧಿ ನಿಗದಿಪಡಿಸಲಾಗಿದ್ದು, ಪ್ರಕ್ರಿಯೆ ಪೂರ್ಣಗೊಳಿಸಿ ಪರಿಹಾರ ಧನ ಪಾವತಿಸಲು ಸೂಕ್ತ ಕ್ರಮ ಜರುಗಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(373)134**
2. ಸದಸ್ಯರ ಹೆಸರು	:	**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)**
3. ಉತ್ತರಿಸುವ ಸಚಿವರು	:	**ಮಾನ್ಯ ಸಣ್ಣ ಕೈಗಾರಿಕಾ ಮತ್ತು ರೇಷ್ಮೆ ಇಲಾಖೆ ಸಚಿವರು (ಶ್ರೀ ವೆಂಕಟ ರಮಣಪ್ಪ)**

ವಿಷಯ; ಬೀದರ್ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಾಕಿ ಇರುವ ಸಬ್ಸಿಡಿಯನ್ನು ಬಿಡುಗಡೆ ಮಾಡುವುದು

ಅ ಬೀದರ್ ಜಿಲ್ಲೆಯಲ್ಲಿ ಇರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಬೀದರ್ ಜಿಲ್ಲೆಯಲ್ಲಿರುವ ನೋಂದಾಯಿತ ಸಣ್ಣ ಕೈಗಾರಿಕೆಗಳ ಸಂಖ್ಯೆ ಕೆಳಕಂಡಂತಿರುತ್ತವೆ.

ಕ್ರ.ಸಂ.	ತಾಲ್ಲೂಕು	ಸಂಖ್ಯೆ
1.	ಔರಾದ	756
2.	ಬೀದರ್	3281
3.	ಬಸವಕಲ್ಯಾಣ	1113
4.	ಹುಮನಾಬಾದ್	1049
5.	ಭಾಲ್ಕಿ	995

ಆ ಈ ಜಿಲ್ಲೆಯಲ್ಲಿ ಯಾವ ಯಾವ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ನೀಡಬೇಕಾಗಿರುವ, ಬಾಕಿಯಿರುವ ಮೊತ್ತವೆಷ್ಟು (ಕೈಗಾರಿಕೆಗಳ ಮತ್ತು ಫಲಾನುಭವಿಗಳ ಹೆಸರು ವಿವರಗಳನ್ನು ಒದಗಿಸುವುದು)

ದಿನಾಂಕ: 31.3.2004ರ ಅಂತ್ಯದವರೆಗೂ ಸಹಾಯಧನ ಮಂಜೂರಾದ ಎಲ್ಲಾ ಘಟಕಗಳಿಗೆ ಬಾಕಿಯಿರುವ ಸಂಪೂರ್ಣ ಸಹಾಯಧನವನ್ನು ಬಿಡುಗಡೆ ಮಾಡಲು ಅನುದಾನ ಲಭ್ಯವಿದ್ದು ಬಿಡುಗಡೆ ಪ್ರಕ್ರಿಯೆ ಜಾರಿಯಲ್ಲಿದೆ. 2008–09ನೇ ಸಾಲಿನ ಆಯವ್ಯಯದಲ್ಲಿ ರೂ.35.00 ಕೋಟಿಗಳ ಅನುದಾನ ಒದಗಿಸಿರುವುದರಿಂದ ಇಡೀ ರಾಜ್ಯದಲ್ಲಿ 2004–05 ಮತ್ತು 2005–06ನೇ ಸಾಲಿನಲ್ಲಿ ಬಾಕಿ ಇರುವ ಸಂಪೂರ್ಣ ಸಹಾಯಧನವನ್ನು ವಿತರಿಸಲು ಅವಕಾಶವಿರುವುದರಿಂದ ಆ ಘಟಕಗಳನ್ನು ಹೊರತು ಪಡಿಸಿದಲ್ಲಿ 2006–07 ಮತ್ತು 2007–08 ರವರೆಗೆ ಬಾಕಿಯಿರುವ ಸಹಾಯಧನ ರೂ.61.54 ಲಕ್ಷಗಳಾಗಿರುತ್ತದೆ. ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುವ ಕೈಗಾರಿಕೆಗಳ ಮತ್ತು ಫಲಾನುಭವಿಗಳ ಹೆಸರು, ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ ಎಷ್ಟು ಅವಧಿಯಿಂದ ಈ ಸಬ್ಸಿಡಿಯನ್ನು ಬಾಕಿ ಉಳಿಸಿಕೊಳ್ಳಲಾಗಿದೆ.

2008–09ನೇ ಸಾಲಿನ ಆಯವ್ಯಯದಲ್ಲಿ ರೂ.35.00 ಕೋಟಿಗಳ ಅನುದಾನ ಒದಗಿಸಿರುವುದರಿಂದ ಇಡೀ ರಾಜ್ಯದಲ್ಲಿ 2004–05 ಮತ್ತು 2005–06ನೇ ಸಾಲಿನಲ್ಲಿ ಬಾಕಿ ಇರುವ ಸಂಪೂರ್ಣ ಸಹಾಯಧನವನ್ನು ವಿತರಿಸಲು

BLANK

BLANK

8	ಮೆ: ಸಂಜಿಕುಮಾರ್ ಗಡ್ಜ್ ಜಾಗರಿ ಯೂನಿಟ್, ಕಿಟ್ಟಾ ಹಳ್ಳಿ, ಬಸವಕಲ್ಯಾಣ ತಾ:	95000
9	ಮೆ: ಗುರು ಸಂಗಬಸವ ವರ್ಮಿಕಂಪೋಸ್ಟ್ ಯೂನಿಟ್, ಬಸವಕಲ್ಯಾಣ ತಾ:	53750
10	ಮೆ: ಶಿವಶಕ್ತಿ ಜಾಗರಿ ಯೂನಿಟ್, ನೀರ್‌ಗುಡಿ ಹಳ್ಳಿ, ಬಸವಕಲ್ಯಾಣ ತಾ:	225000
11	ಮೆ: ಗೋಡೆ ಜಾಗರಿ ಇಂಡಸ್ಟ್ರಿ, ಕಂಬ್ಲೆವಾಡಿ ಹಳ್ಳಿ, ಬಸವಕಲ್ಯಾಣ	87500
12	ಮೆ: ಮಹಾಲಕ್ಷ್ಮಿ ಜಾಗರಿ ಯೂನಿಟ್, ಕಿಟ್ಟ ಹಳ್ಳಿ, ಬಸವಕಲ್ಯಾಣ ತಾ:	125000
13	ಮೆ: ಭವಾನಿ ಫುಟ್‌ವೇರ್ ಯೂನಿಟ್, ರಾಜೇಶ್ವರ್, ಬಸವಕಲ್ಯಾಣ ತಾ:	27500
14	ಮೆ: ಲಲಿತ್ ಫುಡ್ ಪ್ರೊಡಕ್ಟ್ಸ್, ಹಳ್ಳಹಳ್ಳಿ, ಬಸವಕಲ್ಯಾಣ ತಾ:	465000
15	ಮೆ: ಸಂಗಂ ನೋಟ್ ಬುಕ್ ಇಂಡಸ್ಟ್ರಿ, ಎಲ್.ಬಿ.ಚಿತಾಗುಪ್ಪ ಎದುರು, ಹುಮನಾಬಾದ್ ತಾ:	75000
16	ಮೆ: ಕಾಮಧೇನು ದಾಲ್ ಇಂಡಸ್ಟ್ರೀಸ್, ವೆಟರ್ನರಿ ಕಾಲೇಜು, ಬೀದರ್.	800000
17	ಮೆ: ಅಮೃತ್ ಫ್ಲೋರ್ ಮಿಲ್, ಮಲ್ಕಾಪುರ್ ವಿಲೇಜ್, ಬೀದರ್ ತಾ:	20160
18	ಮೆ: ಭವಾನಿ ಫ್ಲೋರ್ ಮಿಲ್, ರಾಜೇಶ್ವರ್ ಹಳ್ಳಿ, ಬೀದರ್	51000
19	ಮೆ: ಆಂಟೆಪ್ಪ ಆಲಿ ಜಾಗರಿ ಯೂನಿಟ್, ಬೇಲೂರು ಹಳ್ಳಿ, ಬಸವಕಲ್ಯಾಣ	60000
20	ಮೆ: ಸೇವಾಲಾಲ್ ಫ್ಲೋರ್ ಮಿಲ್, ಬಸವಕಲ್ಯಾಣ	69000
21	ಮೆ: ಜಜ್ಜೆ ಮಲ್‌ಹಾರ್ ಜಾಗರಿ ಯೂನಿಟ್, ನಿರ್‌ಗುಡಿ ವಿಲೇಜ್, ಬಸವಕಲ್ಯಾಣ	75000
22	ಮೆ: ಮೌಳಿ ಗುಡ್ ಉತ್ಪಾದಕ್, ಬಸವಕಲ್ಯಾಣ	367000
23	ಮೆ: ದೀಪಕ್ ಜಾಗರಿ ಯೂನಿಟ್, ಮಟಾಲಾ ವಿಲೇಜ್, ಬಸವಕಲ್ಯಾಣ	156000
24	ಮೆ: ಸಂಗಮೇಶ್ವರ್ ಜಾಗರಿ ಯೂನಿಟ್, ಮಟಾಲಾ	121100

	ವಿಲೇಜ್, ಬಸವಕಲ್ಯಾಣ	
25	ಮೆ: ಬೀರ್‌ದಾರ್ ಜಾಗರಿ ಇಂಡಸ್ಟ್ರಿ, ಕದಾಲಾಹಳ್ಳಿ, ಭಾಲ್ಕಿ ತಾಲ್ಲೂಕು.	217000
26	ಮೆ: ನೇತಾಜಿ ಆಇಲ್ ಇಂಡಸ್ಟ್ರೀಸ್, ಬೀದರ್.	36300
27	ಮೆ: ವೀರನಾಥ್ ಪಲ್ಸ್ಸ್, ನರಸಿಂಹಪುರ, ಔರಾದ್.	906250
28	ಮೆ: ಮಲ್ಲಿಕಾರ್ಜುನ್ ಖಿಂಡ್ರೆ ಸ್ಟೋನ್ ಕ್ರಷಿಂಗ್ ಇಂಡಸ್ಟ್ರಿ, ಕಲ್ಲೂರು ಹಳ್ಳಿ, ಹುಮನಾಬಾದ್	416500
29	ಮೆ: ನ್ಯೂ ವಿಶ್ವಕರ್ಮಾ ವುಡನ್ ಫರ್ನಿಚರ್, ಎಲ್‌ಐಸಿ ಆಫೀಸ್ ಹತ್ತಿರ, ಬಸವಕಲ್ಯಾಣ.	148320
	ಒಟ್ಟು	**6150825**

1. ಚುಕ್ಕೆ ಗುರುತಿಲ್ಲದ ಪ್ರಸಂ. : (374)135
2. ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
3. ಉತ್ತರಿಸುವ ಸಚಿವರು : (ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು; ಇವು ಯಾವ ಯಾವ ಗ್ರಾಮಗಳ ವ್ಯಾಪ್ತಿಯಲ್ಲಿ ಇವೆ, ಈ ಕೆರೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಇದರಿಂದ ಎಷ್ಟು ಎಕರೆಗಳಿಗೆ ನೀರಾವರಿ ಸೌಲಭ್ಯ ದೊರಕಬಹುದೆಂದು ಅಂದಾಜಿಸಲಾಗಿತ್ತು ಹಾಗೂ ಈ ಕೆರೆಗಳಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕಿಸಿಕೊಡಲಾಗಿದೆ (ಕೆರೆಗಳವಾರು ವಿವರಗಳನ್ನು ಒದಗಿಸುವುದು);

ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ **10** ಕೆರೆಗಳಿದ್ದು, ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಕೆರೆಗಳ ಪುನರುಜ್ಜೀವನಕ್ಕಾಗಿ ಮತ್ತು ಹೂಳೆತ್ತಲು ಪ್ರತಿ ವರ್ಷ ಖರ್ಚು ಮಾಡಲಾದ ಹಣವೆಷ್ಟು;

ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗಳಿಗೆ ವೆಚ್ಚ ಮಾಡಿದ ಹಣ ಎಷ್ಟು;

VS-47